**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 271/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ಉಮೇಶ |
| ತಂದೆಯ ಹೆಸರು | : | ಚಿಕ್ಕಣ್ಣ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಣಿಯನಹುಂಡಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 23.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ–1 ನನ್ನ ಅಣ್ಣ. ಚಾಸಾ–2 ನನ್ನ ಅಣ್ಣನಾದ ಚಾಸಾ–1 ರವರ ಬಾಮೈದ. ಚಾಸಾ–3 ನನ್ನ ತಂದೆ. ಚಾಸಾ–5 ರವರ ಪರಿಚಯವಿರುತ್ತದೆ, ಅವರು ನಮ್ಮ ಊರಿನವರು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯವಿರುತ್ತದೆ. ಅವರು ನಮ್ಮ ಊರಿನವರು.

ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಗಲಾಟೆ ನಡೆದಿರುವುದಿಲ್ಲ ಹಾಗು ನಾನು ಯಾವುದೇ ಗಲಾಟೆ ನೋಡಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕಃ 28.10.2022 ರಂದು ಬೆಳಿಗ್ಗೆ ಕಣಿಯನಹುಂಡಿ ನಮ್ಮ ಗ್ರಾಮದ ನಮಗೆ ಸೇರಿದ ಸ.ನಂ. 115 ರಲ್ಲಿ 04 ಎಕರೆ ಜಮೀನಿಗೆ ಮುಳ್ಳು ತಂತಿ ಬೇಲಿ ಹಾಕಲು ನಾನು, ನನ್ನ ಅಣ್ಣನಾದ ಚಾಸಾ-1, ನನ್ನ ತಂದೆಯಾದ ಚಾಸಾ-3 ಹಾಗು ನನ್ನ ಅಣ್ಣನಾದ ಚಾಸಾ-1 ರವರ ಬಾಮೈದನಾದ ಚಾಸಾ-2 ಹಾಗು ಚಾಸಾ-5 ರವರನ್ನು ಕೆಲಸಕ್ಕೆ ಕರೆದುಕೊಂಡು ಹೋಗಿ ಬೆಳಿಗ್ಗೆ ಸುಮಾರು 08.30 ಗಂಟೆ ಸಮಯದಲ್ಲಿ ಜಮೀನಿನಲ್ಲಿ ತಂತಿ ಕಂಬಗಳನ್ನು ನಡೆಸಲು ಗುಂಡಿ ತೆಗೆಯಲು ಅಳತೆ ಮಾಡುತ್ತಿದ್ದಾಗ ಆರೋಪಿಗಳು ಅಲ್ಲಿಗೆ ಅಕ್ರಮ ಕೂಟ ಕಟ್ಟಿಕೊಂಡು ಕೈಯಲ್ಲಿ ದೊಣ್ಣೆ, ಚಾಕು ಹಾಗು ಕಲ್ಲನ್ನು ಹಿಡಿದುಕೊಂಡು ನಮ್ಮ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ನಮಗೆ ಸೂಳೇಮಕ್ಕಳೇ, ನಮಗೆ ಸೇರಿದ ಜಮೀನಿನಲ್ಲಿ ಕಲ್ಲು ನೆಡಲು ಏಕೆ ಅಳತೆ ಮಾಡುತ್ತೀರಾ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಾ 1 ನೇ ಆರೋಪಿಯು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಏಕಾ-ಏಕಿ ನನ್ನ ಅಣ್ಣನಾದ ಚಾಸಾ-1 ರವರ ಎಡಕೈಗೆ ಹೊಡೆದು ರಕ್ತಗಾಯಪಡಿಸಿರುತ್ತಾರೆಂದರೆ ಸರಿಯಲ್ಲ. ಆಗ 3 ಮತ್ತು 4 ನೇ ಆರೋಪಿಗಳಾದ ಕಾಳಮ್ಮ ಮತ್ತು ಪ್ರೇಮ ಕೈಯಿಂದ ಚಾಸಾ-1 ರವರ ತಲೆಗೆ ಹಾಗು ಮೈ-ಕೈಗೆ ಹೊಡೆದು ನೋವುಂಟುಮಾಡಿರುತ್ತಾರೆಂದರೆ ಸರಿಯಲ್ಲ. ಆಗ ಚಾಸಾ-2 ರವರು ನಮ್ಮ ಬಾಮೈದನಿಗೆ ಹೊಡೆಯಬೇಡಿ ಎಂದು ಬಿಡಿಸಲು ಹೋದಾಗ ಆರೋಪಿಯಾದ ಅಭಿಯು ತನ್ನ ಕೈಯಲ್ಲಿದ್ದ ಚಾಕುವಿನಿಂದ ಚಾಸಾ-2 ರವರ ಎಡ ಕುತ್ತಿಗೆಯ ಬಳಿ ಗೀರಿ ರಕ್ತಗಾಯ ಮಾಡಿರುತ್ತಾರೆಂದರೆ ಸರಿಯಲ್ಲ. 1 ನೇ ಆರೋಪಿಯಾದ ಈರಯ್ಯ ಆರೋಪಿಯಾದ ಅಭಿಯ ಕೈಯಲ್ಲಿದ್ದ ಚಾಕುವನ್ನು

ಕಿತ್ತುಕೊಂಡು ಸದರಿ ಚಾಕುವಿನಿಂದ ಚಾಸಾ-2 ರವರ ಎಡ ತೋಳಿಗೆ ಹೊಡೆದು ರಕ್ತಗಾಯಪಡಿಸಿ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-2 ರವರ ಎಡಭುಜಕ್ಕೆ ಹಲ್ಲೆ ಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿಯಾದ ಬಸವರಾಜು ತನ್ನ ಕೈಯಲ್ಲಿದ್ದ ಕಲ್ಲಿನಿಂದ ಚಾಸಾ-2 ರವರ ಕುತ್ತಿಗೆಯ ಹಿಂಭಾಗಕ್ಕೆ ಹಲ್ಲೆ ಮಾಡಿರುತ್ತಾರೆಂದರೆ ಸರಿಯಲ್ಲ. ಅಲ್ಲದೇ ಆರೋಪಿಯಾದ ಕಾಳಮ್ಮ ಕೈಯಿಂದ ಚಾಸಾ-2 ರವರ ಎದೆಗೆ ಹಲ್ಲೆ ಮಾಡಿ ನೋವುಂಟು ಮಾಡಿರುತ್ತಾರೆಂದರೆ ಸರಿಯಲ್ಲ. ನಂತರ ನಾನು, ನನ್ನ ತಂದೆಯಾದ ಚಾಸಾ-3 ಹಾಗು ಚಾಸಾ-5 ರವರು ಸೇರಿ ಜಗಳ ಬಿಡಿಸಿ ಸಮಾಧಾನಪಡಿಸಿರುತ್ತೇವೆಂದರೆ ಸರಿಯಲ್ಲ. ಆಗ ಆರೋಪಿಗಳು ತಮ್ಮ ಬಳಿ ಇದ್ದ ಚಾಕು, ದೊಣ್ಣೆ ಹಾಗು ಕಲ್ಲನ್ನು ಅಲ್ಲಿಯೇ ಬಿಸಾಕಿ ಮತ್ತು ನೀವುಗಳು ಕಲ್ಲುಗಳನ್ನು ನಡೆಲು ಬಂದರೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ. ಈ ಬಗ್ಗೆ ಅದೇ ದಿನ ಅಂದರೆ ದಿನಾಂಕಃ 28.10.2022 ರಂದು ನನ್ನ ಅಣ್ಣನಾದ ಚಾಸಾ-1 ರವರು ಪೋಲೀಸರಿಗೆ ನಿ.ಪಿ.-1 ರಂತೆ ದೂರನ್ನು ನೀಡಿದ್ದು, ನಾನು ಈ ಎಲ್ಲಾ ಸಂಗತಿಗಳ ಬಗ್ಗೆ ದಿನಾಂಕಃ 05.11.2022 ರಂದು ಪೋಲೀಸರ ಮುಂದೆ "ಈ ಜಮೀನಿಗೆ ಮುಳ್ಳು ತಂತಿಯ ಬೇಲಿ ಹಾಕಲು ದಿನಾಂಕಃ 28.10.2022 ರಂದು ------------------------ ಮತ್ತೆ ನೋಡಿದರೆ ಗುರುತಿಸುತ್ತೇನೆ" (ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ) ಎಂಬಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು **ನಿ.ಪಿ.-5** ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತೆ ಪ್ರಕರಣದ ಎಲ್ಲಾ

ವಿಚಾರಗಳು ಗೊತ್ತಿದ್ದೂ ಘಟನೆಯನ್ನು ಖುದ್ದಾಗಿ ನೋಡಿ ಈ ಬಗ್ಗೆ ನಿ.ಪಿ.-5 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.**

**ಮರು ವಿಚಾರಣೆ: ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**